15

# ದೇವರ ಕೆಲಸಗಾರರು

## (2 ಥೆಸಲೊನೀಕ 3:6-18)

ಬಹುತೇಕವಾಗಿ ಎಲ್ಲರಿಗೂ ಕೆಲಸವು ಅಗತ್ಯವಾಗಿದೆ. ಪ್ರತಿನಿತ್ಯದ ಕೊರತೆಗಳನ್ನು ಪರಿಹರಿಸಲು ಕೆಲಸವು ಅಗತ್ಯವಾಗಿದೆ. ಹೊಸ ಒಡಂಬಡಿಕೆಯಲ್ಲಿನ ಕ್ರೈಸ್ತರನ್ನು "ಕೆಲಸಗಾರರು," "ಕೂಲಿ ಮಾಡುವವರು," "ಸೇವಕರು," "ದಾಸರು," ಅಥವಾ "ಉತ್ತಮ ಕೆಲಸ," ಮಾಡುವವರು ಎಂದು ವಿವರಿಸಲಾಗಿದೆ. ಕ್ರಿಸ್ತನ ಮೂಲಕ ದೇವರಿಗಾಗಿ ಕೆಲಸ ಮಾಡುವವರು ಎಂದು ಹೊಸ ಒಡಂಬಡಿಕೆಯಲ್ಲಿ ಗಮನ ಸೆಳೆಯಲಾಗಿದೆ. ಥೆಸಲೊನೀಕ ಕ್ರೈಸ್ತರ ಕೆಲಸದ ಕುರಿತಾಗಿ ಯಾವ ವಿಧವಾದ ಅಂತರಾರ್ಥವನ್ನು ತಿಳಿಯಬಹುದು? ಆತನಿಗಾಗಿ ಕೆಲಸಮಾಡಲು ಇದರಿಂದ ಯಾವ ವಿಧವಾದ ಸಹಾಯವು ಲಭ್ಯವಿದೆ?

### ಕೆಲಸವು ದೈವೀಕ ಚಟುವಟಿಕೆಯಾಗಿದೆ (3:6-9)

ಥೆಸಲೊನೀಕದಲ್ಲಿನ ಹೊಸ ಕ್ರೈಸ್ತರು, ದೇವರ ಮನೋಭಾವನೆಯನ್ನು ಹೊಂದಿದವರಾಗಿ, ತಮ್ಮ ಹೊಸ ಜೀವಿತದ ಕೆಲಸಗಳನ್ನು ಮಾಡಬೇಕೆಂದು ಸೂಚಿಸಲಾಗಿದೆ. ಅವರ ದೈನಂದಿನ ಕೆಲಸವು ಅವರ ಪರಲೋಕದ ಯಜಮಾನನಿಗೆ ಮೀಸಲಾದ ಕಾರ್ಯವಾಗಿತ್ತು ಮತ್ತು ಪ್ರಮುಖವಾದ ಕರ್ತವ್ಯವಾಗಿತ್ತು.

ಮೊದಲನೆಯದಾಗಿ, ಕೆಲಸದ ಪ್ರಾಮುಖ್ಯತೆಯನ್ನು ಉಪದೇಶದ ಮೂಲಕವಾಗಿ ಅವರು ಅರಿತುಕೊಂಡರು. ಪೌಲನು ಅವರಿಗೆ, "ಮತ್ತೊಬ್ಬರ ಕಾರ್ಯದಲ್ಲಿ ತಲೆ ಹಾಕದೆ ಸುಮ್ಮಗಿದ್ದು ಸ್ವಂತ ಕಾರ್ಯವನ್ನೇ ನಡಿಸಿಕೊಂಡು ಕೈಯಾರೆ ಕೆಲಸಮಾಡುವದೇ ಮಾನವೆಂದೆಣಿಸಿರಿ ಅಂದನು (1 ಥೆಸಲೊನೀಕ 4:11). ಅವರು ಕೆಲಸ ಮಾಡುವಂತ ಸ್ಥಳದಲ್ಲಿ ಅಂದರೆ ದೇವಾಲಯದಲ್ಲಿ ಅಥವಾ ವಿಶೇಷವಾದ ಪರಿಶುದ್ಧ ದಿವಸದಲ್ಲಿ, ದೇವರ ಸೇವೆಗೆ ಅನುಗುಣವಾದ ಕೆಲಸವನ್ನು ಮಾಡಬೇಕಿತ್ತು.

ದೇವರಿಗಾಗಿ ಕೆಲಸಮಾಡುವದು ಅಪ್ಪಣೆಯಾಗಿದೆ, ಆದರೆ ದೇವರಿಂದಲೇ ದೇವರ ಕೆಲಸಕ್ಕಾಗಿ ನೇಮಿಸಲ್ಪಡುವದು, ದೇವರ ಕುಟುಂಬದಲ್ಲಿ ಆಶೀರ್ವಾದದ ಗೌರವವಾಗಿರುತ್ತದೆ. ನಮಗೆ ಒಬ್ಬ ಯಜಮಾನನಿದ್ದು, ನಮ್ಮನ್ನು ಆತನು ಅರಿತು ಪೂರ್ಣವಾಗಿ ಪ್ರೀತಿಸುತ್ತಾನೆ. ಕೆಲಸವು ಅವಶ್ಯವಿದ್ದರೂ, ಅದು ದೇವರು ಅನುಗ್ರಹಿಸಿರುವ ಆಶೀರ್ವಾ ದವಾಗಿದೆ!

ಎರಡನೆಯದಾಗಿ, ಥೆಸಲೊನೀಕದವರು ಮಾದರಿಯನ್ನು ಅನುಸರಿಸಿ, ಕೆಲಸದ ಪ್ರಾಮುಖ್ಯತೆಯನ್ನು ಅರಿತುಕೊಂಡರು:

> ನೀವು ನಮ್ಮನ್ನು ಅನುಸರಿಸಿ ಹೇಗೆ ನಡೆಯಬೇಕೆಂದು ನೀವೇ ಬಲ್ಲಿರಿ; ನಾವು ನಿಮ್ಮಲ್ಲಿ ಅಕ್ರಮವಾಗಿ ನಡೆಯಲಿಲ್ಲ; ನಾವು ಹಣಕೊಡದೆ ಯಾರ ಬಳಿಯಲ್ಲಿಯೂ ಊಟಮಾಡಲಿಲ್ಲ; ನಿಮ್ಮಲ್ಲಿ ಒಬ್ಬರಿಗೂ ಭಾರವಾಗಬಾರದೆಂದು ಹಗಲಿರುಳು ಕಷ್ಟದಿಂದಲೂ ಪ್ರಯಾಸದಿಂದಲೂ ದುಡಿದು ಜೀವನಮಾಡಿಕೊಂಡೆವು. ನಿಮಿಂದ ಪೋಷಣೆ ಹೊಂದುವದಕ್ಕೆ ನಮಗೆ ಹಕ್ಕಿಲ್ಲವೆಂದು ಹಾಗೆ ಮಾಡಲಿಲ್ಲ, ನೀವು ನಮ್ಮನ್ನು ಅನುಸರಿಸುವದಕ್ಕಾಗಿ ನಿಮಗೆ ಮಾದರಿಯಾಗಿರೋಣವೆಂದೇ ಮಾಡಿದೆವು (3:7-9).

ಈ ಬೋಧಕರುಗಳು ಎರಡು ವಿಧವಾದ ಕೆಲಸಗಳನ್ನು ಮಾಡುತ್ತಿದ್ದರು. ತಮ್ಮ ಅಗತ್ಯತೆಗಳ

ನಿವಾರಣೆಗಾಗಿ, ತಮ್ಮ ಕೈಯಿಂದ ಉದ್ಯೋಗ ನಡಿಸಿದ್ದರು. ಮತ್ತು ಸಂಬಳವನ್ನು ತೆಗೆದುಕೊಳ್ಳದೆ; ಬುದ್ಧಿ ಹೇಳುತ್ತಾ, ಧೈರ್ಯಪಡಿಸುತ್ತಾ, ಅವರನ್ನು ಉತ್ತೇಜನಪಡಿಸುವ ಕೆಲಸವನ್ನು ಸಹ ನಡೆಸುತ್ತಿದ್ದರು (1 ಥೆಸಲೊನೀಕ 2:11). ಈ ಎರಡು ಕೆಲಸಗಳಲ್ಲಿ ಒಂದನ್ನು ದೇವರಿಂದ ಹಕ್ಕಾಗಿ ಪಡೆದಿದ್ದರು; ಆದಾಗ್ಯೂ ಅವರು ಎರಡು ಕೆಲಸಗಳನ್ನೂ ಮಾಡಿದರು, ಆ ಹೊಸ ಕ್ರೈಸ್ತರು ದಿನ ನಿತ್ಯದ ತಮ್ಮ ಜೀವಿತದಲ್ಲಿ ದೇವರ ಕೆಲಸ ಮಾಡಬೇಕೆಂಬ ಮಾದರಿಯನ್ನು ಸೂಚಿಸುತ್ತಿದ್ದರು ಆದ್ದರಿಂದ ನೀವೂ ದೇವರ ಕೆಲಸಗಾರರಾಗಿರಿ!

## ಕೆಲವರು ಕೆಲಸವನ್ನೇ ಮಾಡುವದಿಲ್ಲ (3:10-12)

ಕೆಲಸದ ಕುರಿತು ಪ್ರತಿಯೊಬ್ಬರೂ ಒಳ್ಳೆಯ ಮನೋಭಾವನೆಯನ್ನು ಹೊಂದಿರುವದಿಲ್ಲ. ಕೆಲವರು ಅದನ್ನು "ಕೆಟ್ಟ ಅಗತ್ಯತೆ" ಎನ್ನುವರು, ಇತರರು ಅದರಿಂದ ತಪ್ಪಿಸಿಕೊಳ್ಳುವರು, ಕೆಲಸಮಾಡದೆ ಸುಮ್ಮನೆ ಇದ್ದು, ಲಾಭವಿಲ್ಲದ ಸುತ್ತಾಟದಲ್ಲಿ ಕೆಲವರು ಕೊಚ್ಚಿಕೊಳ್ಳುವರು. ಇದು ಹೊಸದಾದ ಸಮಸ್ಯೆಯಲ್ಲ. ಈ ದಿನದಲ್ಲಿ ಕೆಲವರು ಇರುವಂತೆ, ಥೆಸಲೊನೀಕ ಸಭೆಯಲ್ಲಿಯೂ ಕೆಲಸ ಮಾಡದವರಿದ್ದರು. ಅವರ ಜೀವಿತವನ್ನು ಅಕ್ರಮವಾಗಿ ನಡೆಯುವವರು ಅಥವಾ "ಅ ಶಿಸ್ತು ಬದ್ಧರಾಗಿದ್ದವರು" (3:6, 7, 11) ಎಂದು ವಿವರಿಸಲಾಗಿದೆ. ಇಲ್ಲಿ, "ನಿಷ್ಪ್ರಯೋಜಕರು" ಎಂಬ ಗ್ರೀಕ್ ಪದವನ್ನು ಬಳಸಲಾಗಿದೆ. ಅವರು ಸೋಮಾರಿಗಳಾಗಿ ಕೆಟ್ಟ ಮಾದರಿವಳ್ಳವರಾಗಿದ್ದರು ಅದು ದೇವರ ಅಪ್ಪಣೆಗೆ ವಿರೋಧವಾದ ಪಾಪವಾಗಿದೆ.

ಅವರು ಇತರರ ಕಾರ್ಯದಲ್ಲಿ ತಲೆಹಾಕುವವರಾಗಿದ್ದರು ತಮ್ಮ ಕೆಲಸದಲ್ಲಿ ಮಗ್ನರಾಗಿರಲಿಲ್ಲ (1 ಥೆಸಲೊನೀಕ 4:11). ಅವರು ಇತರರ ಕಾರ್ಯದಲ್ಲಿ ಕೈ ಹಾಕುವ ಸೋಮಾರಿಗಳಾಗಿದ್ದರು. ಆದರೆ ಥೆಸಲೊನೀಕದ ಹೊಸ ಕ್ರೈಸ್ತರು ಸ್ವಂತ ಕಾರ್ಯವನ್ನೆ ನಡಿಸಿಕೊಂಡು ಹೋಗಬೇಕೆಂದು ತಿಳಿಸಲಾಯಿತು ಸೋಮಾರಿಗಳು "ಕೆಲಸ ಮಾಡದೆ ಇತರರ ಕೆಲಸದ ಸುತ್ತಲೂ ಇರುತ್ತಿದ್ದರು." ಇತರರ ವ್ಯವಹಾರವನ್ನು ತಮ್ಮ ವ್ಯವಹಾರವನ್ನಾಗಿಸಿದ್ದರು; ಮತ್ತು ಇತರರ ಒಳ್ಳೆಯ ಕೆಲಸದಲ್ಲಿ ತಲೆ ಹಾಕುತ್ತಿದ್ದರು.

ಇದೇ ರೀತಿಯಲ್ಲಿ, ಈ ದಿವಸಗಳಲ್ಲಿ, ಕೆಲಸಮಾಡದವರೂ ಸಹ ಇತರರ ಕೆಲಸದಲ್ಲಿ ತಲೆ ಹಾಕುವವರಾಗಿರುತ್ತಾರೆ. ಅದು ಸೋಮಾರಿತನಕ್ಕೆ ಸಮಾನವಾದ ಪಾಪವಾಗಿರುತ್ತದೆ. ನಾವುಗಳು ಇತರರ ಕೆಲಸದಲ್ಲಿ ತಲೆಹಾಕುವವರಾಗಿರಬಾರದು; ಕೆಲಸವಿರಲಿ ಅಥವಾ ಇಲ್ಲದೆ ಇರಲಿ ಎಚ್ಚರವುಳ್ಳವರಾಗಿರಬೇಕು. ಕೆಲಸವಿಲ್ಲದೆ ಇರುವಾಗ, ಸಹಜವಾಗಿ ಈ ಕಾರ್ಯಗಳನ್ನು ಮಾಡಲು ಅವಕಾಶವು ದೊರಕುತ್ತದೆ.

ಕೆಲವು ಧಾರ್ಮಿಕ ಗುಂಪುಗಳು ಇತರರ ಕಾರ್ಯವನ್ನು ಅರಿಯುವ ಸಲುವಾಗಿ ಕೆಲವರನ್ನು ನೇಮಿಸಿಕೊಳ್ಳುವರು. ಇದನ್ನು ಇನ್ನೊಂದು ಅರ್ಥದಲ್ಲಿ "ಇತರರ ಕೊರತೆಗಳನ್ನು ನೀಗಿಸಲು," "ಹೊಸ ಕ್ರೈಸ್ತರನ್ನು ಉತ್ತೇಜಿಸಲು," ಅಥವಾ "ಹಿಂಡನ್ನು ಕಾಯಲು" ಅಥವಾ ಅವರನ್ನು ಗಮನಿಸಲು ಎಂಬ ವ್ಯಾಖ್ಯಾನವಾಗಿದೆ. ಥೆಸಲೊನೀಕದಲ್ಲಿದ್ದ, ಹಿರಿಯರಾಗಲೀ, ಅಥವಾ ಅವರನ್ನು ಗಮನಿಸಲು ಎಂಬ ವ್ಯಾಖ್ಯಾನವಾಗಿದೆ. ಥೆಸಲೊನೀಕದಲ್ಲಿದ್ದ, ಹಿರಿಯರಾಗಲೀ, ಅಥವಾ ಕ್ರೈಸ್ತರಾಗಲೀ, ಯಾವುದೇ ವಿಧದಲ್ಲೂ ಇತರರ ಕಾರ್ಯದಲ್ಲಿ ತಲೆಹಾಕಬಾರದೆಂಬ ಸಂದೇಶವನ್ನು ಹೊಂದಿದ್ದರು, ಮತ್ತು ಖಾಸಗಿ ಪತ್ತೇದಾರರಾಗಿರಬಾರದು ಎಂದು ತಿಳಿಯಲ್ಪಟ್ಟಿದ್ದರು. ಪಾಪವು ಪ್ರಕಟವಾದಾಗ, ಅದನ್ನು ನ್ಯಾಯವಾಗಿ ಪರಿಹರಿಸಬೇಕು; ಆದರೆ ಇತರರ ರಹಸ್ಯಗಳನ್ನು ಅರಿಯಲು, ದೇವರು ಗುಢಾಚಾರರನ್ನು ನೇಮಕ ಮಾಡಿರುವದಿಲ್ಲ. ಅದರ ಬದಲಾಗಿ, ನಾವು ನಮ್ಮ ಸ್ವಂತ ಕಾರ್ಯಗಳನ್ನು ಮಾಡುವವರಾಗಿ, ಇತರ ಜನರು ಸಹ ತಮ್ಮ ಸ್ವಂತ ಕೆಲಸಗಳನ್ನು ಮಾಡಲು ಉತ್ತೇಜಿಸಬೇಕೆಂದು ಮಾತ್ರ ಹೇಳಲಾಗಿದೆ.

ನಮ್ಮ ಕೆಲಸವು, ದೇವರ ಕೆಲಸವಾಗಿರಬೇಕಷ್ಟೆ! ಕ್ರೈಸ್ತರಾದಂತ ಗುಲಾಮರಿಗೆ ಪೌಲನು

ಬರೆದು, "ನೀವು ಯಾವ ಕೆಲಸವನ್ನು ಮಾಡಿದರೂ ಅದನ್ನು ಮನುಷ್ಯರಿಗೋಸ್ಕರವೆಂದು ಮಾಡದೆ ಕರ್ತನಿಗೋಸ್ಕರವೇ ಎಂದು ಮನಃಪೂರ್ವಕವಾಗಿ ಮಾಡಿರಿ" ಅಂದನು (ಕೊಲೊಸ್ಸೆ 3:23). ದೇವರ ಕೆಲಸವಾಗಿರಬೇಕು!

## ಕೆಲಸ ಮಾಡದೆ ಇರುವವರನ್ನು ನಿರಾಕರಿಸಬೇಕು (3:13-15)

ಸಭೆಯ ಸದಸ್ಯರು ಕೆಲಸ ಮಾಡಲು ನಿರಾಕರಿಸಿದರೆ, ಏನು ಮಾಡಬೇಕು? ವೇದ ವಾಕ್ಯದ ಉತ್ತರವು ಸರಳವಾಗಿದೆ: "ಕೆಲಸ ಮಾಡದವನು ಊಟಮಾಡಬಾರದೆಂದು ಹೇಳಲಾಗಿದೆ," (3:10ಬಿ). ಸೋಮಾರಿಗಳನ್ನು ಪೋಷಿಸಬೇಡಿರಿ! "ಅವನ ಸಹವಾ ಸ ದಲ್ಲಿ ಸೇರಬೇಡಿರಿ" (3:6, 14). ಅವನ ಸ್ನೇಹ ಮಾಡಬೇಡಿರಿ! ಅವನನ್ನು ನಿಮ್ಮ ಆರಾಧನೆಗೆ ಆಹ್ವಾನಿಸಬೇಡಿರಿ! ನಿಮ್ಮ ಅನ್ಯೋನ್ಯತೆಯಲ್ಲಿ ಸೇರಿಸಿಕೊಳ್ಳಬೇಡಿರಿ! ಅವರು ನಿಮ್ಮ ಆಹಾರವನ್ನು ಹಂಚಿಕೊಳ್ಳದೆ ಇರಲಿ! ಈ ವಿಷಯದಲ್ಲಿ ದೇವರ ಸಂದೇಶ ಇದಾಗಿರುತ್ತದೆ.

ಸೋಮಾರಿಗಳೊಂದಿಗೆ ಈ ರೀತಿ ನಡಕೊಳ್ಳುವದು ಅತಿರೇಖ ಎನ್ನಿಸಬಹುದು, ಈ ರೀತಿಯ ಪೋಷಣೆಯು, ಅವನನ್ನು ಉಪವಾಸ ಇಡುವ ಕಾರಣವಲ್ಲ. ಆದರೆ ಅವರು ದೇವರಂತೆಯೂ ಮತ್ತು ದೇವರ ಜನರಂತೆಯೂ ವರ್ತಿಸುತ್ತಿರುವದಿಲ್ಲವೆಂದು ಅರಿಯ ಬೇಕು, ಅವರು ದೇವರ ಮಾರ್ಗದಿಂದ ಪ್ರತ್ಯೇಕವಾಗಿರುವರು. ಅವರು ಈ ವರ್ತನೆಯನ್ನು ಹೊಂದಿರುವದರಿಂದ, ಅವರನ್ನು ದೇವರ ನಂಬಿಗಸ್ತರಾದ ಸಹೋದರ ಹಾಗೂ ಸಹೋ ದರಿಯರೆಂದು ಪರಿಗಣಿಸಲಾಗದು. ಅವರ ಸೋಮಾರಿತನವು ಎಷ್ಟು ಅಸಹ್ಯಕರವಾದದ್ದು ಎಂದು ಅವರು ತಿಳಿಯಬೇಕು. ಬೋಧನೆಗಳಿಂದಲೂ ಎಚ್ಚರಿಕೆ ನೀಡುವದರಿಂದಲೂ ಮತ್ತು ಮಾದರಿಯ ಜೀವಿತದಿಂದಲೂ, ಇರುವ ಜೊತೆ ಕ್ರೈಸ್ತರು ಸೋಮಾರಿಗಳಾದ ಸಹೋದರರು ತಮ್ಮದೇ ಕೆಲಸ ಮಾಡುತ್ತಾ ತಮ್ಮ ವ್ಯವಹಾರದಲ್ಲೇ ಇರಬೇಕೆಂದು ತಿಳಿಸಬೇಕು.

ದೇವರ ಕುಟುಂಬದಲ್ಲಿರುವವರು ದೇವರ ಶಿಸ್ತನ್ನು ಹಂಚಿಕೊಳ್ಳಬೇಕು. ಸೋಮಾರಿಗಳಾದ ಸಹೋದರರು ಈ ಶಿಸ್ತನ್ನು ಒಪ್ಪಿಕೊಳ್ಳದಿದ್ದರೆ, ದೇವರಿಂದ ಆಗುವ ಲಾಭಗಳನ್ನು ಕಳೆದು ಕೊಳ್ಳುವರು. ನಮ್ಮ ಯಥಾರ್ಥವಾದ ವರ್ತನೆಗಳು ನ್ಯಾಯವಾದ ನಿರ್ಣಯಗಳನ್ನು ಮಾಡ ಬೇಕು; ಆಗ ಕೆಲಸಕ್ಕೆ ಬಾರದವನು ಕೆಲಸದ ಪ್ರಾಮುಖ್ಯತೆಯನ್ನು ಅರಿತು, ದೇವರ ಶಿಸ್ತನ್ನು ಮೀರುವದರಿಂದ ಉಂಟಾಗುವ ಫಲಿತಾಂಶವನ್ನು ಅರಿಯುವನು. ಅವರು ಮಾನಸಾಂತರ ಪಡಲಿ ಅಥವಾ ಪಡದೆ ಇರಲಿ, ಇತರರ ಕಾರ್ಯದಲ್ಲಿ ತಲೆಹಾಕುವದನ್ನು ನಿಲ್ಲಿಸಬೇಕು, ಕೆಲಸವನ್ನು ಪ್ರಾರಂಭಿಸುವದು ಅವರ ಸ್ವಂತ ವಿಷಯವಾಗಿದೆ; ಆದರೆ ಅವರು ಸಂದೇಹ ವಿಲ್ಲದ ಅಪಾಯದ ವರ್ತನೆಯಲ್ಲಿರುವರು.

ಕೆಲಸ ಮಾಡದವರು, ಅವರ ಮನೋಭಾವವನ್ನು ಬದಲಿಸಿ ಕೆಲಸಮಾಡಲು ನಮ್ಮ ಸಹಾಯದ ಅಗತ್ಯವಿರುತ್ತದೆ. ಕೆಲಸದ ಕುರಿತಾದ ದೇವರ ಚಿತ್ತದ ಬೋಧನೆಯಿಂದ ಅವರಿಗೆ ಸಹಾಯ ಮಾಡಬಹುದು, ನಾವು ಉತ್ತಮವಾದ ಕೆಲಸವನ್ನು ಮಾಡುವ ಮಾದರಿಯಿಂದ ಸಹಾಯಿಸಬಹುದು, ದೈವ ಭಕ್ತಿಯಿಲ್ಲದ ವರ್ತನೆಗಳಿಗೆ ಉಂಟಾಗುವ ಪರಿಣಾಮಗಳನ್ನು ತಿಳಿಸಿ ಅವರನ್ನು ಎಚ್ಚರಿಸಬಹುದು.

## ಮುಕ್ತಾಯ

ಕ್ರೈಸ್ತರಿಗೆ, ಎಲ್ಲಾ ಕೆಲಸಗಳು ದೇವರ ಕೆಲಸಗಳಾಗಿರುತ್ತವೆ. ದೇವರು ಯಜಮಾನ ನಾಗಿದ್ದು, ದೇವರು ಕೆಲಸ ನೀಡುವವನು, ನಾವು ಮಾಡುವ ಸಕಲ ಕಾರ್ಯಕ್ಕೂ ಒಡೆಯನು, ಮನೆ ಕೆಲಸಕ್ಕೂ ಹಾಗೂ ಇತರೆ ಕೆಲಸಕ್ಕೂ ನಾಯಕನಾಗಿದ್ದಾನೆ. ಅದು ದೇವರ ಕೆಲಸವಾ ಗಿದ್ದು, ಅದನ್ನು ಆತನಿಗಾಗಿ ಮಾಡತಕ್ಕದ್ದು, ಅದು ವಿಶೇಷವಾದದ್ದು, ಪರಿಶುದ್ಧವಾದದ್ದು, ಮೀಸ ಲಾದದ್ದು, ಆಗಿರುತ್ತದೆ. ಅದು ಪ್ರಮುಖವಾದದ್ದು. ಒಳ್ಳೆ ಕೆಲಸ ಮಾಡುವದು, ಪರಿಪಕ್ವತೆಗೆ

ಬಂದ ಕ್ರೈಸ್ತನ ಸೂಚನೆಯಾಗಿರುತ್ತದೆ.

ಸೋಮಾರಿಗಳಾದ ಕ್ರೈಟೆಯವರು, "ಸತ್ಕ್ರಿಯೆಗಳಲ್ಲಿ ಆಸಕ್ತರಾಗಿರಬೇಕೆಂದು" ಎಚ್ಚರಿಸಲಾಯಿತು, "ಒಳ್ಳೆಯ ಕ್ರಿಯೆಗಳಲ್ಲಿ ಮನಸ್ಸಿಟ್ಟು," "ಸಕಲ ಕೊರತೆಗಳನ್ನು ನೀಗಿಸಿ ಕೊಳ್ಳಲು ಒಳ್ಳೆಯ ಕಾರ್ಯಗಳನ್ನು ಮಾಡಬೇಕೆಂದು, ಅದರಿಂದ ಪ್ರತಿಫಲವನ್ನು ಹೊಂದಿಕೊಳ್ಳಬೇಕೆಂದು ತಿಳಿಸಲಾಯಿತು" (ತೀತ 2:14; 3:8, 14). ಇದು ನಮಗೆಲ್ಲರಿಗೂ ಉತ್ತಮವಾದ ಸಲಹೆ ಸೂಚನೆಗಳಾಗಿರುತ್ತವೆ.

ನಮ್ಮ ಕೆಲಸದ ಸ್ಥಳದಲ್ಲಿ ಒಳ್ಳೆಯ ಉದ್ಯೋಗವನ್ನು ನಾವು ಮಾಡುವಾಗ, ನಾವು ದೇವರಿಗೆ ಮಾತ್ರ ವಿಧೇಯರಾಗಿರದೇ ಕೊರತೆಗಳನ್ನು ನೀಗುವ ಸಲುವಾಗಿ ಉತ್ತಮವಾದ ಮಾದರಿಗಳಾಗಿರುತ್ತವೆ, ಮತ್ತು ದೇವರಿಗಾಗಿ ಪ್ರತಿಫಲ ಕೊಡುತ್ತೇವೆ. ನಮ್ಮ ಉತ್ತಮವಾದ ಕೆಲಸಗಳ ಮೂಲಕ ನಮ್ಮ ಯಜಮಾನನಿಗೆ ಗೌರವವನ್ನು ಸಲ್ಲಿಸುತ್ತೇವೆ. ಪ್ರತಿನಿತ್ಯ ಆತನ ಮಾರ್ಗದಲ್ಲಿ ಕೆಲಸ ಮಾಡುತ್ತಾ ನಮ್ಮ ಯಜಮಾನನಿಗೆ ಸೇವೆ ಮಾಡಿ ಗೌರವಿಸೋಣ!